# ನೀವು ಕೇಳಿದಿರಿ?

ಬಿ. ಬಸವರಾಜ್, ಹರಿಹರ
ಕೆಲ ಹೆಂಗಸರಿಗೆ ತಾಳಿ ಕಟ್ಟಿದ ಗಂಡನಿಗಿಂತ ತಾಳಿಯ ಮೇಲೆ ಪ್ರೀತಿ ಇರುವುದೇಕೆ?



ಇದು ಕೇವಲ ಕೊರಳಿಗೆ ಬಂದಿದೆ; ಅವನು ಕುತ್ತಿಗೆಗೇ ಬಂದಿರುತ್ತಾನಂತೆ.

ಕೆ. ಸೋಮೇಶ್ವರ, ಬೆಂಗಳೂರು
ಧಾರಾವಾಹಿಗಳಲ್ಲಿ ಗಂಡು ಪಾತ್ರಧಾರಿಗಳಿಗೆ ಗಡ್ಡವೇ ಆಭರಣ, ಮೌನವೇ ಶೃಂಗಾರ ಎಂಬಂತಿರುವುದೇಕೆ?
ಮೇಕಪ್ ಖರ್ಚು ಮಿಗಿಸಲು ಗಡ್ಡ; ಮಾತು ಮಾತೆಗೇ ಮೀಸಲು.

ಬಿ. ಚಂದ್ರೇಗೌಡ, ಬೆಂಗಳೂರು
'ದೈವಾಂಶಸಂಭೂತ' ಎಂದರೆ ಯಾರು?
ಹಲವು ಅಂಶ ದೈವಗುಣ, some ಭೂತಗುಣ ಇರುವವರು.

ದಿನೇಶ್, ಗುಡ್ಡದೂರು
ವಿದ್ಯಾವಂತರೇ ತಮ್ಮ ಮಾತಾಪಿತೃಗಳನ್ನು ವೃದ್ಧಾಶ್ರಮಕ್ಕೆ ಸೇರಿಸಲು ಕಾರಣ?



ಲಂಬಕೋಣಗಳಿಗೆ ಲಘುಕೋಣಗಳನ್ನು ಕಂಡರೆ ತಾತ್ಸಾರವಂತೆ.

ವಿ.ಎಸ್. ಹಿಂದೂಪುರ, ಬಳ್ಳಾರಿ
ಹಿಂದೆ 'ಊರಿಗೆ ಬಂದವಳು ನೀರಿಗೆ ಬಾರಳೇ?' ಎನ್ನುತ್ತಿದ್ದರು. ಈಗ?
'ಫ್ಲ್ಯಾಟಿಗೆ ಬಂದವಳು ಚಾಟಿಗೆ ಬಾರಳೇ?' ಎನ್ನುವರು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ನಾವೇಕೆ ಹುಟ್ಟುತ್ತೇವೆ, ಬದುಕುತ್ತೇವೆ ಮತ್ತು ಸಾಯುತ್ತೇವೆ?
ಕ್ರಮವಾಗಿ ಹಿಂದಿನವರಿಗೆ, ಇಂದಿನವರಿಗೆ, ಮುಂದಿನವರಿಗೆ ಕಷ್ಟ–ಸುಖ ನೀಡಲು.

ಕೆ.ವಿ. ಗೋವಿಂದಾಚಾರಿ, ಮೈಸೂರು
ಭೂಮಿ, ಗಾಳಿ, ನೀರು, ಬೆಂಕಿ, ಆಗಸಗಳನ್ನು ಪಂಚ 'ಭೂತ' ಎನ್ನುವುದೇಕೆ?
ಅವು ಭೂತಕಾಲದಿಂದಲೂ ಇರುವುದರಿಂದ.

ಆರ್.ಕೆ. ಹಾದಿಮನಿ, ಧಾರವಾಡ
ಪ್ರಳಯಕ್ಕೂ ಅಲ್ಲೋಲ ಕಲ್ಲೋಲಕ್ಕೂ ವ್ಯತ್ಯಾಸವೇನು?
ಅಲ್ಲೋಲ ಕಲ್ಲೋಲ ಕೆದರಿದ ಜೇನುಗೂಡು; ಪ್ರಳಯ ಬೆದರಿಸುವವರು ಕಲ್ಪಿಸಿರುವ ಗುಮ್ಮ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಸಂಸಾರದಲ್ಲಿ ಗುಣಾಕಾರ, ಭಾಗಾಕಾರ ಇರುತ್ತೆ. ಶೇಷ ಉಳಿಯುವುದು ಯಾವಾಗ?
ಆಕಾರ ಮತ್ತು ಗುಣಗಳು ಭಟ್ಟಿಯಿಳಿದ ಮಕ್ಕಳೇ ಶೇಷ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಮದುವೆ ಎನ್ನುವುದು ಬಂಧನದ ಪಂಜರವೆ?
ಊಹೂಂ. ಗಂಡುಹೆಣ್ಣು ಸೇರಿ ಸೊಗಯಿಸಿಕೊಳ್ಳಬೇಕಾದ ಹಂದರ.

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕ
ಪೊಲೀಸರಲ್ಲಿ ಅನೇಕರಿಗೆ ಏಕೆ ಬೊಜ್ಜು ಬೆಳೆದಿರುತ್ತೆ?
ಇವರು ಡ್ಯೂಟಿ ಮಾಡುವ ಸ್ಥಳದಲ್ಲೇ ಕದ್ದು, ಇವರನ್ನು ಅಟ್ಟಾಡಿಸದ ಕಳ್ಳರದೇ ತಪ್ಪು.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ
ಮದುವೆ ಆಗು ಎಂದರೆ ಥೂ ಎಂದಳು?
'ಆಯಿತು' ಎಂದಳಂತೆ; ಕೀಳರಿಮೆಯ ಗಂಡಿಗೆ ಥೂ ಎಂದು ಕೇಳಿಸಿತಂತೆ.

ಬಿ.ಆರ್. ಗೀತಾ, ಬೆಂಗಳೂರು
ಮನುಷ್ಯ ಸತ್ತ ಬಳಿಕ ತಮಟೆ ಬಾರಿಸುವುದು ಏಕೆ?
ಇದ್ದಾಗ ಬಾರಿಸಿದರೆ 'ಸದ್ದು' ಎಂದು ಗದರುವನಲ್ಲ.

ಫಾಲನೇತ್ರ ಸಜ್ಜನ, ಶಿರಸಿ
ಸಂಖ್ಯಾ ಜ್ಯೋತಿಷ್ಯ ಎಷ್ಟು ನಿಜ?
ರಾಜಕಾರಣಿಗಳ ಆಶ್ವಾಸನೆಗಳಷ್ಟು.

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ, ಸುರಧೇನುಪುರ
ವಿಶಾಲವಾದ ಭಾರತ ದೇಶದಲ್ಲಿ ಫ್ಲೈಓವರ್‌ಗಳು ಏಕೆ?
ಟ್ರಾಫಿಕ್ ಜಾಮಿನಿಂದ ಹಾರಾಡುವ ಬದಲು ಹಾರುರಸ್ತೆಯಲ್ಲಿ ಸಾಗಿಹೋಗಲೆಂದು.

ಬಿ. ರಾಮಚಂದ್ರರಾವ್, ಸಾಗರ
ಸದನದಲ್ಲಿ ಜನಸಾಮಾನ್ಯರ ಸಂಕಷ್ಟಗಳ ಬಗ್ಗೆ ಚರ್ಚೆ ನಡೆಯುವುದು ಯಾವಾಗ?
ಸದನದ ರಜಾ ದಿನದಂದು; ಇಬ್ಬರು ದ್ವಾರಪಾಲಕರ ನಡುವೆ.

ಪೆಮ್ಮನಹಳ್ಳಿ ಚಿಕ್ಕಣ್ಣ, ಪಾವಗಡ
ರಕ್ತದ ಕಲೆಯ ಪತ್ರ ಕಳುಹಿಸಿದಾಗ?
ಬ್ಲಡ್ ಗ್ರೂಪ್ ಮ್ಯಾಚ್ ಆಗುವುದೇ ಎಂದರಿತೇ ಓಪನ್ ಮಾಡಬೇಕು.

ಆರ್.ಎಸ್. ಪವಾರ್, ಆರೆಮ್ ನಗರ
ಧ್ಯಾನ ಮಾಡುವಾಗ ಕೇಳಿಸುವ ಎದೆಬಡಿತವು ಬೇರೆ ಸಮಯದಲ್ಲಿ ಕೇಳದಲ್ಲ?



ಪರಧ್ಯಾನ ಇರುವಾಗ ಒಳಜ್ಞಾನ ಇರದು.

ಬೀರೂರು ಕೃಷ್ಣಮೂರ್ತಿ, ಬೆಂಗಳೂರು
ದೇವರು ಕುಡಿಯುವುದು ಸುರಾಪಾನ. ಮನುಷ್ಯರು ಕುಡಿಯುವುದು?
ಬುರಾ(ಕೆಟ್ಟ) ಪಾನ.

ಮಂಡಿ ಕುಮಾರ್, ಬೆಂಗಳೂರು
ಮುತ್ತು, ತುತ್ತು, ಕುತ್ತು; ಸಂಬಂಧವಿದೆಯೆ?
ಮುತ್ತು ಕೊಡುವವಳಿಗೆ ತುತ್ತು ಕೊಡದಿದ್ದರೆ ವಿಚ್ಛೇದನದ ಕುತ್ತು ಖಚಿತ.

ಸುಧೀಂದ್ರ, ಬೆಂಗಳೂರು
ಇತ್ತೀಚೆಗೆ ಬಹುತೇಕ ಹೋಟೇಲುಗಳಲ್ಲಿ ಕೆಲವು ತಿನಿಸುಗಳ ಸ್ಯಾಂಪಲ್ ಪ್ರದರ್ಶನಕ್ಕಿಡುವರಲ್ಲ?
'ನೋಡಿಯೂ ಹಳ್ಳಕ್ಕೆ ಬಿದ್ದರೆ ನಾವು ಜವಾಬ್ದಾರರಲ್ಲ' ಎಂದು ಸೂಚಿಸಲಿದ್ದೀತು.

■ ರಾಮ್